ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು - 560001

ಸಂಖ್ಯೆ: ಸಿ4(7).ಸ.ಪ್ರೌ.ಶಾ.ಶಿ.ವರ್ಗಾ 17/2021-22 ದಿನಾಂಕ: 14.01.2022

**: ಕೌನ್ಸಿಲಿಂಗ್ ವೇಳಾಪಟ್ಟಿ :**

ವಿಷಯ: 2020-21ನೇ ಸಾಲಿನ ಅಂತರ್ ಘಟಕ ವಿಭಾಗ ಹೊರಗಿನ ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಕೋರಿಕೆ/ಪರಸ್ಪರ ವರ್ಗಾವಣೆಯನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವ ಕುರಿತು ವೇಳಾಪಟ್ಟಿ:

ಉಲ್ಲೇಖ:1. ಈ ಕಛೇರಿಯ ಜ್ಞಾಪನ ಸಂಖ್ಯೆ: ಶಿ.ವ.ಕೋಶ.ಸಾ.ವ/01/2020-21 ದಿನಾಂಕ: 25/11/2021.
2. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2020 ರ ಸಂಖ್ಯೆ:: ಇಪಿ 08/ಇಟಿಆರ್ 2020 ದಿನಾಂಕ: 09/07/2020.
3. ಈ ಕಛೇರಿಯ ಜ್ಞಾಪನ ಸಂಖ್ಯೆ: ಶಿ.ವ.ಕೋಶ.ಸಾ.ವ/01/2020-21 ದಿನಾಂಕ: 13/01/2022.

------******------

ವಿಷಯದನ್ವಯ 2020-21ನೇ ಸಾಲಿನ ಅಂತರ್ ಘಟಕ ವಿಭಾಗ ಹೊರಗಿನ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಕೋರಿಕೆ/ಪರಸ್ಪರ ಸಾಮಾನ್ಯ ವರ್ಗಾವಣೆಯನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಹಮ್ಮಿಕೊಳ್ಳಲು ಉಲ್ಲೇಖ (3) ರಲ್ಲಿ ಪರಿಷ್ಕೃತ ವೇಳಾಪಟ್ಟಿಯನ್ನು ಹೊರಡಿಸಿದೆ. ಅದರಂತೆ ದಿನಾಂಕ: 11/11/2020 ರ ಅಧಿಸೂಚನೆಯನುಸಾರ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಅಂತರ್ ಘಟಕ ವಿಭಾಗದ ಹೊರಗಿನ ಸರ್ಕಾರಿ ಪ್ರೌಢ ಶಾಲಾ ಸಹಶಿಕ್ಷಕರು/ದೈಹಿಕ ಶಿಕ್ಷಕರು/ವಿಶೇಷ ಶಿಕ್ಷಕರುಗಳ ಕೋರಿಕೆ ಹಾಗೂ ಪರಸ್ಪರ ವರ್ಗಾವಣೆ ಕೌನ್ಸಿಲಿಂಗ್‌ನ್ನು ದಿನಾಂಕ: 18-01-2022 ರಿಂದ ದಿನಾಂಕ: 25-01-2022 ರವರೆಗೆ ಈ ಕೆಳಕಂಡ ವೇಳಾಪಟ್ಟಿಯಂತೆ **"ಶಿಕ್ಷಕರ ಸಧನ, ಕೆಂಪೇಗೌಡ ರಸ್ತೆ, ಕಾವೇರಿ ಭವನದ ಮುಂಭಾಗ, ಬೆಂಗಳೂರು-560001"** ಇಲ್ಲಿ ಹಮ್ಮಿಕೊಳ್ಳಲಾಗಿದೆ. ಅಂತಿಮ ಆಧ್ಯತಾ ಕೌನ್ಸಿಲಿಂಗ್ ಪಟ್ಟಿಯಲ್ಲಿರುವ ಶಿಕ್ಷಕರು ನಿಗಧಿತ ದಿನಾಂಕ ಹಾಗೂ ಸಮಯಕ್ಕೆ ಮೂಲ ಅರ್ಜಿ ಹಾಗೂ ಕೋರಿರುವ ಆಧ್ಯತೆಯ ಮೂಲ ದಾಖಲೆಗಳೊಂದಿಗೆ ಕೌನ್ಸಿಲಿಂಗ್‌ನಲ್ಲಿ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳಲು ತಿಳಿಸಿದೆ.

**ಅಂತರ್ ಘಟಕ-ವಿಭಾಗದ ಹೊರಗಿನ ಕೌನ್ಸಿಲಿಂಗ್ ವೇಳಾಪಟ್ಟಿ. (as on 11/11/2020)**

ಸರ್ಕಾರಿ ಪ್ರೌಢ ಶಾಲಾ ಸಹಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು, ವಿಶೇಷ ಶಿಕ್ಷಕರು,

| ಕ್ರ.ಸಂ | ದಿನಾಂಕ | ಸಮಯ | ಹುದ್ದೆಯ ವಿವರ | ಆಧ್ಯತಾ ಕ್ರಮ ಸಂಖ್ಯೆ ಯಿಂದ - ರವರೆಗೆ | ಷರಾ |
|---|---|---|---|---|---|
| 1 | 18-01-2022 | 10-00 ರಿಂದ | ಸಹ ಶಿಕ್ಷಕರು | 01 - 250 | 250 ಅರ್ಜಿಗಳು |
| 2 | 19-01-2022 | 10-00 ರಿಂದ | ಸಹ ಶಿಕ್ಷಕರು | 251 - 550 | 300 ಅರ್ಜಿಗಳು |
| 3 | 20-01-2022 | 10-00 ರಿಂದ | ಸಹ ಶಿಕ್ಷಕರು | 551 - 850 | 300 ಅರ್ಜಿಗಳು |
| 4 | 21-01-2022 | 10-00 ರಿಂದ | ಸಹ ಶಿಕ್ಷಕರು | 851 - 1167 | 317 ಅರ್ಜಿಗಳು |
| 5 | 24-01-2022 | 10-00 ರಿಂದ | ದೈಹಿಕ ಶಿಕ್ಷಕರು<br>ವಿಶೇಷ ಶಿಕ್ಷಕರು | 01 - 196<br>01 - 124 | 196 ಅರ್ಜಿಗಳು<br>124 ಅರ್ಜಿಗಳು |

**ಅಂತರ್ ಘಟಕ-ವಿಭಾಗದ ಹೊರಗಿನ ಪ್ರೌಢ ಶಾಲಾ ಶಿಕ್ಷಕರ ಪರಸ್ಪರ ವರ್ಗಾವಣೆ (as on 11/11/2020)**

| ಕ್ರ.ಸಂ | ದಿನಾಂಕ | ಸಮಯ | ಹುದ್ದೆಯ ವಿವರ | ಆಧ್ಯತಾ ಕ್ರಮ ಸಂಖ್ಯೆ ಯಿಂದ - ರವರೆಗೆ | ಷರಾ |
|---|---|---|---|---|---|
| 1 | 25-01-2022 | 10-00 ರಿಂದ | ಸಹಶಿಕ್ಷಕರು<br>ದೈಹಿಕ ಶಿಕ್ಷಕರು<br>ವಿಶೇಷ ಶಿಕ್ಷಕರು | 01 - 10<br>01 - 01<br>01 - 01 | |

**ವಿಶೇಷ ಸೂಚನೆ:**

1. ಕೌನ್ಸಿಲಿಂಗ್ ಅರ್ಹತಾ ಪಟ್ಟಿಯಲ್ಲಿರುವ ಶಿಕ್ಷಕರು ಮಾತ್ರ ಆದ್ಯತಾ ಪಟ್ಟಿಯಲ್ಲಿನ ಕ್ರಮ ಸಂಖ್ಯೆಯಂತೆ ನಿಗಧಿಪಡಿಸಿದ ದಿನಾಂಕಗಳಂದು ವೇಳಾಪಟ್ಟಿಯಲ್ಲಿ ತಿಳಿಸಿರುವಂತೆ ನಿಗಧಿತ ಸಮಯಕ್ಕೆ ಕೌನ್ಸಿಲಿಂಗ್‌ಗೆ ಹಾಜರಾಗತಕ್ಕದ್ದು.
2. ಶಿಕ್ಷಕರು ಕೌನ್ಸಿಲಿಂಗ್‌ಗೆ ಹಾಜರಾಗುವಾಗ ತಮ್ಮ ಭಾವಚಿತ್ರವಿರುವ ಗುರುತಿನ ಚೀಟಿಯೊಂದಿಗೆ ಹಾಜರಾಗುವುದು.
3. ವರ್ಗಾವಣೆ ಅರ್ಜಿಯಲ್ಲಿ ಕೋರಿರುವ ಆದ್ಯತೆಗೆ ಸಂಬಂಧಿಸಿದಂತೆ ಪೂರಕ ಮೂಲ ದಾಖಲೆಗಳು.
4. ಪರಸ್ಪರ ವರ್ಗವಣೆಯ ಪೂರಕ ದಾಖಲೆಗಳು
5. ಕೋವಿಡ್-19 ನಿಯಮಗಳನ್ನು ಪಾಲಿಸಿ ಕಡ್ಡಾಯವಾಗಿ ಮಾಸ್ಕ್ ಧರಿಸಿ ಕೌನ್ಸಿಲಿಂಗ್‌ಗೆ ಹಾಜರಾಗುವುದು.

14/01/2022

(ಡಾ॥ ವಿಶಾಲ್ ಆರ್) ಭಾ.ಆ.ಸೇ
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಬೆಂಗಳೂರು.

ಇವರುಗಳಿಗೆ,

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲ್ಬುರ್ಗಿ.
3. ವಿಭಾಗೀಯ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಧಾರವಾಡ. ಬೆಳಗಾವಿ ವಿಭಾಗ.
4. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳಿಗೆ ಕಳುಹಿಸುತ್ತಾ ವೇಳಾಪಟ್ಟಿಯನ್ನು ತಮ್ಮ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಹಾಗೂ ಸಂಬಂಧಿಸಿದ ಶಿಕ್ಷಕರಿಗೆ ಮಾಹಿತಿಯನ್ನು ನೀಡಲು ಕ್ರಮವಹಿಸುವುದು.
5. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
6. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ, ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಕಳುಹಿಸುತ್ತಾ ವೇಳಾಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
7. ಕಛೇರಿ ಪ್ರತಿ.